ಕಾರ್ಯಕ್ರಮವನ್ನು ರೂಪಿಸುತ್ತೇವೆ. ಅದನ್ನು ಏಶ್ಯಬ್ಯಾಂಕ್‌ಗೆ ಪ್ರೊಜೆಕ್ಟ್ ಮಾಡಬೇಕೆನ್ನುವ ಆಲೋಚನೆ ಕೂಡ ಇದೆ.

ಅಧ್ಯಕ್ಷರು: ನನ್ನದೂ ಒಂದು ಸಲಹೆ ಇದೆ. ಅದೇನೆಂದರೆ ಎಲ್ಲೆಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದ ಜನಸಂಖ್ಯೆ ಜಾಸ್ತಿ ಇದೆ ಅಲ್ಲಿ ಹೆಚ್ಚು ಬೋರ್‌ವೆಲ್‌ಗಳನ್ನು ಕೊಡಬೇಕು. ಉದಾಹರಣೆಗೆ ಹೇಳಬೇಕೆಂದರೆ ಉತ್ತರ ಕನ್ನಡದಲ್ಲಿ ಇವರ ಸಂಖ್ಯೆ ಎಂಟು ಪರ್ಸೆಂಟ್ ಇದ್ದರೆ ಹಾಸನ ಮತ್ತು ಮಂಡ್ಯ ಜಿಲ್ಲೆಯಲ್ಲಿ ಹತ್ತು ಪರ್ಸೆಂಟ್ ಇದೆ. ಆದರೆ ಕೋಲಾರ, ಗುಲ್ಬರ್ಗಾ ಮತ್ತು ಮೈಸೂರು ಜಿಲ್ಲೆಗಳಲ್ಲಿ ಇವರ ಸಂಖ್ಯೆ 36 ಪರ್ಸೆಂಟ್ ಇದೆ. ಕಡಿಮೆ ಜನಸಂಖ್ಯೆ ಇರುವ ಕಡೆಯೂ 20 ಬೋರ್‌ವೆಲ್ ಮತ್ತು ಹೆಚ್ಚು ಜನಸಂಖ್ಯೆ ಇರುವ ಕಡೆಗೂ 20 ಬೋರ್‌ವೆಲ್ ಕೊರೆಯುತ್ತೇವೆಂದರೆ ಯಾವ ನ್ಯಾಯ ಹೇಳಿ? ಆದುದರಿಂದ ಎಲ್ಲೆಲ್ಲಿ ಪರಿಶಿಷ್ಟ ಜಾತಿ: ವರ್ಗದ ಜನಸಂಖ್ಯೆ ಹೆಚ್ಚು ಇರುತ್ತಾರೆ ಅಲ್ಲಿಗೆ ಹೆಚ್ಚು ಸಂಖ್ಯೆ ಕೊಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಅಧ್ಯಕ್ಷರೆ, ತಮ್ಮ ಸಲಹೆಯನ್ನು ಗಮನದಲ್ಲಿಟ್ಟುಕೊಂಡು ಪರಿಶಿಷ್ಟ ಜಾತಿಯವರು ಹೆಚ್ಚು ಇರುವ ಕಡೆ ಹೆಚ್ಚು ಬೋರ್‌ವೆಲ್ ಕೊರೆಸಲು ಪ್ರಯತ್ನ ಮಾಡುತ್ತೇನೆ. ಇನ್ನು ಡಾರ್ಕ್ ಏರಿಯಾ ಬಗ್ಗೆ ಮಾನ್ಯ ಸದಸ್ಯರು ಕೇಳಿದ್ದಾರೆ. ಹಿಂದೆ ಇದ್ದ ನಿಬಂಧನೆಯನ್ನು ಈಗ ಕೆ.ಪಿ.ಟಿ.ಸಿ.ಎಲ್ ತೆಗೆದು ಹಾಕಿದೆ ಎಂಬ ವಿಷಯವನ್ನು ಸದನದಲ್ಲಿ ತಿಳಿಸಬಯಸುತ್ತೇನೆ.

ಅಂಕೋಲ, ಸಿರ್ಸಿ, ಯಲ್ಲಾಪುರ ತಾಲ್ಲೂಕಿನಲ್ಲಿ ಹಾಸ್ಟೆಲ್‌ಗಳ ಮಂಜೂರಾತಿ.

219(2626)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) 1999-2000, 2000-01ನೇ ಸಾಲಿನಲ್ಲಿ ಮೆಟ್ರಿಕ್-ಪೂರ್ವ, ಮೆಟ್ರಿಕ್ ನಂತರದ ಹಾಸ್ಟೆಲ್ ಎಷ್ಟು ಮಂಜೂರಾತಿಯಾಗಿವೆ; ಎಲ್ಲೆಲ್ಲಿ; (ವಿವರ ಒದಗಿಸುವುದು)

2) ಉತ್ತರ ಕನ್ನಡ ಜಿಲ್ಲೆಯಲ್ಲಿ ಎಷ್ಟು ಪ್ರಸ್ತಾವನೆ ಸರ್ಕಾರಕ್ಕೆ ಬಂದಿವೆ; (ವಿವರ ಒದಗಿಸುವುದು)?

3) ಅಂಕೋಲಾ; ಸಿರ್ಸಿ; ಯಲ್ಲಾಪುರ ತಾಲ್ಲೂಕಿನ ನಗರ ಗ್ರಾಮಾಂತರದಲ್ಲಿ ಮೆಟ್ರಿಕ್-ಪೂರ್ವ ವಸತಿನಿಲಯದ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

4) ಬಂದಿದ್ದಲ್ಲಿ, ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು): 1) 1999-2000, 2000-2001ನೇ ಸಾಲಿನಲ್ಲಿ ಮಂಜೂರಾತಿ ನೀಡಿರುವ ಮೆಟ್ರಿಕ್-ಪೂರ್ವ, ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳ ವಿವರ ಈ ಕೆಳಕಂಡಂತೆ ಇರುತ್ತದೆ:

	1999-2000		2000-01	
	ಮೆಟ್ರಿಕ್ ಪೂರ್ವ	ಮೆಟ್ರಿಕ್ ನಂತರ	ಮೆಟ್ರಿಕ್ ಪೂರ್ವ	ಮೆಟ್ರಿಕ್ ನಂತರ
ಸಮಾಜ ಕಲ್ಯಾಣ ಇಲಾಖೆ	20	25	25	25
ಹಿಂದುಳಿದ ವರ್ಗಗಳ ಇಲಾಖೆ	15	10	8	22
ಪರಿಶಿಷ್ಟ ವರ್ಗಗಳ ಇಲಾಖೆ	7	-	5	-
ಅಲ್ಪ ಸಂಖ್ಯಾತರ ಇಲಾಖೆ	-	-	-	5

ವಿವರವನ್ನು ಅನುಬಂಧ-1ರಲ್ಲಿ ನೋಡುವುದು.

2) ಹಿಂದುಳಿದ ವರ್ಗಗಳ ಇಲಾಖೆ ವತಿಯಿಂದ ಮಾತ್ರ 3 ಮೆಟ್ರಿಕ್-ನಂತರದ ಹಾಗೂ 29 ಮೆಟ್ರಿಕ್-ಪೂರ್ವ ವಿದ್ಯಾರ್ಥಿನಿಲಯಗಳ ಮಂಜೂರಾತಿಗಾಗಿ ಮನವಿಗಳು ಬಂದಿರುತ್ತವೆ. ವಿವರಗಳನ್ನು ಅನುಬಂಧ-2ರಲ್ಲಿ ನೀಡಲಾಗಿದೆ.

3) ಸದರಿ ಸ್ಥಳಗಳಲ್ಲಿ ವಿದ್ಯಾರ್ಥಿನಿಲಯಗಳನ್ನು ತೆರೆಯುವ ಅವಶ್ಯಕತೆ ಇದೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ಸ್ವೀಕೃತವಾಗಿರುವ ಮನವಿಗಳನ್ನು ಪರಿಶೀಲಿಸಲಾಗುತ್ತದೆ.

4) ಸದರಿ ಸ್ಥಳಗಳಲ್ಲಿ ವಿದ್ಯಾರ್ಥಿನಿಲಯ ಅವಶ್ಯಕತೆ ಹಾಗೂ ಆಯವ್ಯಯದಲ್ಲಿ ಒದಗಿಸಲಾಗಿರುವ ಹಣದ ಅವಕಾಶದ ಮೇರೆಗೆ ಹೊಸ ವಿದ್ಯಾರ್ಥಿನಿಲಯದ ಪ್ರಾರಂಭದ ಬಗ್ಗೆ ಪರಿಶೀಲಿಸಲಾಗುವುದು.

ಅನುಬಂಧ- I

1999-2000ನೇ ಸಾಲಿನಲ್ಲಿ ಪರಿಶಿಷ್ಟ ಜಾತಿಯವರಿಗಾಗಿ ಮಂಜೂರಾದ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು:

ಕ್ರ. ಸಂ.	ಜಿಲ್ಲೆ	ತಾಲ್ಲೂಕು: ಮತಕ್ಷೇತ್ರ	ಮಂಜೂರು ಮಾಡಿರುವ ಸ್ಥಳ
೧.	ಕೊಪ್ಪಳ	ಯಲಬುರ್ಗಾ	ಚಿಕ್ಕಮ್ಯಾಗೇರಿ (ಪ-ಜಾತಿ ಬಾಲಕರು)
೨.	ಕೋಲಾರ	ಕೋಲಾರ	ಸುಗಟೂರು (ಪ.ಜಾ.- ಬಾಲಕರು)
೩.	ಕೋಲಾರ	ಮುಳಬಾಗಿಲು	ಹೆಚ್.ಗೊಲ್ಲಹಳ್ಳಿ (ಪ.ಜಾ.-ಬಾಲಕಿಯರು)
೪.	ಕೋಲಾರ	ಬಾಗೇಪಲ್ಲಿ	ಪಾಳ್ಯಕೆರೆ (ಪ.ಜಾ.- ಬಾಲಕಿಯರು)
೫.	ಕೋಲಾರ	ಬಾಗೇಪಲ್ಲಿ	ಚಾಕವೇಲು (ಪ.ಜಾ.-ಬಾಲಕಿಯರು)
೬.	ಕೋಲಾರ	ಶಿಡ್ಲಘಟ್ಟ	ಸಾದಲಿ (ಪ.ಜಾ.-ಬಾಲಕರು)
೭.	ಕೋಲಾರ	ಗುಡಿಬಂಡೆ	ಲಕ್ಷ್ಮೀಸಾಗರ (ಪ.ಜಾ.-ಬಾಲಕರು)
೮.	ದಾವಣಗೆರೆ	ಹರಪನಹಳ್ಳಿ	ಮೈಸೂರು (ಪ.ಜಾ-ಬಾಲಕರು)
೯.	ರಾಯಚೂರು	ಲಿಂಗಸುಗೂರು	ಹಟ್ಟಿ (ಪ.ಜಾ.-ಬಾಲಕರು)
೧೦.	ತುಮಕೂರು	ಶಿರಾ	ಗೊಲ್ಲಹಳ್ಳಿ (ಪ.ಜಾ.-ಬಾಲಕರು)
೧೧.	ಬಳ್ಳಾರಿ	ಕೂಡ್ಲಿಗಿ	ಮಾಳಪ (ಪ.ಜಾ.-ಬಾಲಕರು)
೧೨.	ಹಾವೇರಿ	ಹಾವೇರಿ	ಹೊಸರಿತ್ತಿ (ಪ.ಜಾ-ಬಾಲಕರು)
೧೩.	ಬೆಳಗಾಂ	ಅಥಣಿ	ಅಥಣಿ(ಮರಬಾದ್) (ಪ.ಜಾ.-ಬಾಲಕಿಯರು)
೧೪.	ಮೈಸೂರು	ಟಿ.ನರಸೀಪುರ	ಚದುರಹಳ್ಳಿ (ಪ.ಜಾ-ಬಾಲಕರು)

೧೫.	ಬೆಂಗಳೂರು(ಗ್ರಾ)	ನೆಲಮಂಗಲ	ನರಸೀಪುರ (ಪ.ಜಾ.-ಬಾಲಕರು)
೧೬.	ಬೆಂಗಳೂರು(ನಗರ)	ಬೆಂಗಳೂರು(ದ)	ಕಾಡುಗೋಡಿ (ಪ.ಜಾ.-ಬಾಲಕರು)
೧೭.	ಬಿಜಾಪುರ	ಮುದ್ದೇಬಿಹಾಳ	ರಕ್ಕಸಗಿ(ಪ.ಜಾ.-ಬಾಲಕರು)
೧೮.	ಕೋಲಾರ	ಚಿಂತಾಮಣಿ	ಯಗವಕೋಟೆ (ಪ.ಜಾ-ಬಾಲಕರು)
೧೯.	ಬೀದರ್	ಬೀದರ್	ಅಡವಾದ (ಪ.ಜಾ.-ಬಾಲಕರು)
೨೦.	ಮೈಸೂರು	ಮೈಸೂರು	ಮೈಸೂರು (ಪ.ಜಾ-ಬಾಲಕರು)

ಅನುಬಂಧ

೧೯೯೯-೨೦೦೦ನೇ ಸಾಲಿನಲ್ಲಿ ಪರಿಶಿಷ್ಟ ಜಾತಿಯವರಿಗಾಗಿ ಮಂಜೂರಾದ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು:

ಕ್ರ. ಸಂ.	ಜಿಲ್ಲೆ	ತಾಲ್ಲೂಕು: ಮತಕ್ಷೇತ್ರ	ಮಂಜೂರು ಮಾಡಿರುವ ಸ್ಥಳ
೧.	ಬೆಳಗಾಂ	ಬೆಳಗಾಂ	ಹುದಲಿ (ಬಾಲಕರು)
೨.	ಹಾಸನ	ಹೊಳೆನರಸೀಪುರ	ಹೊಳೆನರಸೀಪುರ ಟೌನ್ (ಬಾಲಕಿಯರು)
೩.	ಕೋಲಾರ	ಕೋಲಾರ	ಕೋಲಾರ ಟೌನ್(ಬಾಲಕರು)
೪.	ಹಾವೇರಿ	ಹಾವೇರಿ	ಹಾವೇರಿ ಟೌನ್(ಬಾಲಕಿಯರು)
೫.	ಗದಗ	ರೋಣ	ರೋಣ(ಬಾಲಕರು)
೬.	ಧಾರವಾಡ	ಧಾರವಾಡ	ಧಾರವಾಡ ಟೌನ್(ಬಾಲಕರು)
೭.	ತುಮಕೂರು	ಪಾವಗಡ	ಪಾವಗಡ ಟೌನ್(ಬಾಲಕಿಯರು)
೮.	ಬೆಂಗಳೂರು(ಗ್ರಾ.)	ನೆಲಮಂಗಲ	ನೆಲಮಂಗಲ ಟೌನ್(ಬಾಲಕರು)
೯.	ಕೋಲಾರ	ಚಿಕ್ಕಬಳ್ಳಾಪುರ	ಪೇಠಸಂದ್ರ(ಬಾಲಕರು)
೧೦.	ಕೋಲಾರ	ಮುಳಬಾಗಿಲು	ತಾಯಲೂರು(ಬಾಲಕಿಯರು)
೧೧.	ಚಾಮರಾಜನಗರ	ಕೊಳ್ಳೇಗಾಲ	ಕೊಳ್ಳೇಗಾಲ ಟೌನ್(ಬಾಲಕರು)
೧೨.	ಮೈಸೂರು	ಟಿ.ನರಸೀಪುರ	ಮೂಗೂರು(ಬಾಲಕರು)
೧೩.	ಮೈಸೂರು	ಗುಂಡ್ಲುಪೇಟೆ	ಗುಂಡ್ಲುಪೇಟೆ ಟೌನ್(ಬಾಲಕರು)
೧೪.	ದಾವಣಗೆರೆ	ಹರಪನಹಳ್ಳಿ	ಹರಪ್ಪನಹಳ್ಳಿ ಟೌನ್(ಬಾಲಕರು)
೧೫.	ದಾವಣಗೆರೆ	ದಾವಣಗೆರೆ	ದಾವಣಗೆರೆ ನಗರ (ಬಾಲಕರು)
೧೬.	ಕೋಲಾರ	ಬಂಗಾರುಪೇಟೆ	ಬಂಗಾರುಪೇಟೆ ಟೌನ್(ಬಾಲಕರು)

೧೮.	ದಾವಣಗೆರೆ	ಪರಿಹರ	ಕೊಂಡಜ್ಜಿ (ಬಾಲಕಿಯರು)
೧೯.	ಚಾಮರಾಜನಗರ	ಕೊಳ್ಳೇಗಾಲ	ಲೊಕ್ಕನಹಳ್ಳಿ (ಬಾಲಕಿಯರು)
೨೯.	ಕೊಪ್ಪಳ	ಯಲಬುರ್ಗಾ	ಕುಕನೂರು (ಬಾಲಕರು)
೨೦.	ಚಾಮರಾಜನಗರ	ಗುಂಡ್ಲುಪೇಟೆ	ಗುಂಡ್ಲುಪೇಟೆ (ಬಾಲಕಿಯರು)
೨೧.	ಗುಲ್ಬರ್ಗಾ	ಗುರುಮಿಠಕಲ್	ಗುರುಮಿಠಕಲ್ (ಬಾಲಕರು)
೨೨.	ಮೈಸೂರು	ನಂಜನಗೂಡು	ಮೊಡ್ಡಕಪಲಂದೆ (ಬಾಲಕರು)
೨೩.	ರಾಯಚೂರು	ಮಾನ್ವಿ	ಮಾನ್ವಿ ಟೌನ್ (ಬಾಲಕಿಯರು)
೨೪.	ಬಿಜಾಪುರ	ಬಿಜಾಪುರ	ಬಿಜಾಪುರ ಟೌನ್ (ಬಾಲಕಿಯರು)
೨೫.	ಕೊಪ್ಪಳ	ಗಂಗಾವತಿ	ಕರಟಗಿ (ಬಾಲಕರು)

ಅನುಬಂಧ-೨

೨೦೦೦-೦೧ನೇ ಸಾಲಿನಲ್ಲಿ ಪರಿಶಿಷ್ಟ ಜಾತಿಯವರಿಗಾಗಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳ ವಿವರ

ಕ್ರ. ಸಂ.	ಜಿಲ್ಲೆ	ತಾಲ್ಲೂಕು:	ಮಂಜೂರು ಮಾಡಿರುವ ಸ್ಥಳ
೧.	ಬೆಂಗಳೂರು (ಗ್ರಾ.)	ಕನಕಪುರ	ಕೋಡಿಹಳ್ಳಿ (ಬಾಲಕರು)
೨.	ಬೆಂಗಳೂರು (ಗ್ರಾ.)	ಕನಕಪುರ	ಚಿಕ್ಕಮುದವಾಡಿ (ಬಾಲಕರು)
೩.	ಬೆಂಗಳೂರು (ಗ್ರಾ.)	ರಾಮನಗರ	ವರಗೆಹಳ್ಳಿ (ಬಾಲಕರು)
೪.	ಬೆಂಗಳೂರು(ನಗರ)	ಬೆಂಗಳೂರು (ದ)	ಉತ್ತರಹಳ್ಳಿ(ಬಾಲಕಿಯರು)
೫.	ತುಮಕೂರು	ಕುಣಿಗಲ್	ಶಿರವಾರ (ಬಾಲಕರು)
೬.	ದಾವಣಗೆರೆ	ಚೆನ್ನಗಿರಿ ತಾ.	ತಾವರೆಕೆರೆ (ಬಾಲಕರು)
೭.	ಕೋಲಾರ	ಚಿಕ್ಕಬಳ್ಳಾಪುರ	ಹೊಸಹುಡ್ಯಾ (ಕಂಬದಹಳ್ಳಿ) ಬಾಲಕರು
೮.	ಮಂಡ್ಯ	ಮದ್ದೂರು	ಕೊಪ್ಪ (ಬಾಲಕರು)
೯.	ಮಂಡ್ಯ	ಮದ್ದೂರು	ಹೊನ್ನಲಗೆರೆ (ಬಾಲಕರು)
೧೦.	ಚಿಕ್ಕಮಗಳೂರು	ತರೀಕೆರೆ ತಾ.	ಹುಣಸೇಘಟ್ಟ (ಬಾಲಕರು)
೧೧.	ಚಿಕ್ಕಮಗಳೂರು	ಕಡೂರು ತಾ.	ಮತ್ತಿಘಟ್ಟ (ಬಾಲಕಿಯರು)
೧೨.	ಬೆಳಗಾಂ	ಬೈಲಹೊಂಗಲ	ಮೈಕಲಮಾವಡಿ (ಬಾಲಕರು)
೧೩.	ಬೆಳಗಾಂ	ಅಥಣಿ	ಮಂಗಸುಳಿ (ಬಾಲಕಿಯರು)
೧೪.	ಬಳ್ಳಾರಿ	ಹಡಗಲಿ	ಉತ್ತಂಗಿ (ಬಾಲಕರು)
೧೫.	ಬಳ್ಳಾರಿ	ಬಳ್ಳಾರಿ	ಕುರಗೋಡ (ಬಾಲಕರು)
೧೬.	ಹಾವೇರಿ	ಸವಣೂರು	ದೊಂಬರಮತ್ತೂರು (ಬಾಲಕರು)

೧೭.	ಉತ್ತರಕನ್ನಡ	ಹಳಿಯಾಳ	ಸಾಂಬ್ರಾಣಿ(ಬಾಲಕರು)
೧೮.	ಗದಗ	ಗದಗ	ಸೊರಟೂರು (ಬಾಲಕರು)
೧೯.	ಗದಗ	ರೋಣ	ಗಜೇಂದ್ರಗಡ (ಬಾಲಕಿಯರು)
೨೦.	ಗುಲ್ಬರ್ಗಾ	ಯಾದಗಿರಿ	ಮಲಹಾರ (ಬಾಲಕರು)
೨೧.	ಬಿಜಾಪುರ	ಸಿಂಧಗಿ ತಾ.	ದೇವರಹಿಪ್ಪರಗಿ(ಬಾಲಕರು)
೨೨.	ಬಾಗಲಕೋಟೆ	ಜಮಖಂಡಿ	ತೇರದಾಳ (ಬಾಲಕಿಯರು)
೨೩.	ಕೊಪ್ಪಳ	ಗಂಗಾವತಿ	ಕನಕಗಿರಿ (ಬಾಲಕಿಯರು)
೨೪.	ಚಿತ್ರದುರ್ಗ	ಜಂಪನಹಟ್ಟಿ	ಅನ್ನೇಹಾಳು(ಬಾಲಕಿಯರು)
೨೫.	ಹಾಸನ	ಬೇಲೂರು	ಬೀಕನಹಳ್ಳಿ (ಬಾಲಕಿಯರು)

ಅನುಬಂಧ

೨೦೦೦-೦೧ನೇ ಸಾಲಿನಲ್ಲಿ ಪರಿಶಿಷ್ಟ ಜಾತಿಯವರಿಗಾಗಿ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ವಿವರ

ಕ್ರ. ಸಂ.	ಜಿಲ್ಲೆ	ತಾಲ್ಲೂಕು:	ಮಂಜೂರು ಮಾಡಿರುವ ಸ್ಥಳ
೧.	ಬೆಂಗಳೂರು ಜಿಲ್ಲೆ	ಬೆಂಗಳೂರು(ಉ)ತಾ.	ಮಲ್ಲತ್ತಹಳ್ಳಿ (ಪಿ.ಯು.ಹಾಸ್ಟಲ್) ಬಾಲಕರು
೨.	ಬೆಂಗಳೂರು ಜಿಲ್ಲೆ	ಬೆಂಗಳೂರು(ದ)ತಾ.	ಜಯನಗರ(ಎಂ ಅಂಡ್ ಇ ಹಾಸ್ಟಲ್) ಬಾಲಕಿಯರು
೩.	ಬೆಂಗಳೂರು (ಗ್ರಾ.) ಜಿಲ್ಲೆ	ದೇವನಹಳ್ಳಿ ತಾ.	ವಿಜಯಪುರ (ಬಾಲಕರು)
೪.	ಬೆಂಗಳೂರು (ಗ್ರಾ.)	ಮಾಗಡಿ ತಾ.	ಮಾಗಡಿ ಟೌನ್ (ಬಾಲಕಿಯರು)
೫.	ಚಿತ್ರದುರ್ಗ ಜಿಲ್ಲೆ	ಹೊಸದುರ್ಗ ತಾ.	ಹೊಸದುರ್ಗ ಟೌನ್(ಬಾಲಕರು)
೬.	ಚಿತ್ರದುರ್ಗ	ಚಳ್ಳಕೆರೆ ತಾ.	ನಾರಾಯಣಪುರ (ಬಾಲಕರು)
೭.	ದಾವಣಗೆರೆ	ದಾವಣಗೆರೆ	ದಾವಣಗೆರೆ ೧ ಬ್ಲಾಕ್(ಬಾಲಕರು)
೮.	ದಾವಣಗೆರೆ	ಜಗಳೂರು ತಾ.	ಜಗಳೂರು ಟೌನ್(ಬಾಲಕರು)
೯.	ಮೈಸೂರು	ಪಿರಿಯಾಪಟ್ಟಣ	ಪಿರಿಯಾಪಟ್ಟಣ (ಬಾಲಕರು)
೧೦.	ಮೈಸೂರು	ನಂಜನಗೂಡು	ನಂಜನಗೂಡು (ಬಾಲಕಿಯರು)
೧೧.	ಶಿವಮೊಗ್ಗ	ಶಿವಮೊಗ್ಗ	ಶಿವಮೊಗ್ಗ (ಪ್ರೊ.ಜಿ.ಕೃಷ್ಣಪ್ಪ ಸ್ಮಾರಕ ಪ.ಪೂ.) - ಬಾಲಕರು
೧೨.	ಶಿವಮೊಗ್ಗ	ಶಿಕಾರಿಪುರ	ಶಿಕಾರಿಪುರ (ಬಾಲಕಿಯರು)
೧೩.	ಹಾಸನ	ಚೆನ್ನರಾಯಪಟ್ಟಣ	ಚೆನ್ನರಾಯಪಟ್ಟಣ(ಬಾಲಕರು)
೧೪.	ಹಾಸನ	ಹೊಳೆನರಸೀಪುರ	ಹೊಳೆನರಸೀಪುರ(ಬಾಲಕರು)

೧೫.	ಬೆಳಗಾಂ	ಚಿಕ್ಕೋಡಿ ತಾ.	ಕಲ್ಲೋಳ(ಬಾಲಕರು)
೧೬.	ಗುಲ್ಬರ್ಗಾ	ಸೇಡಂ	ಸೇಡಂ(ಬಾಲಕರು)
೧೭.	ಬಳ್ಳಾರಿ	ಹಗರಿಬೊಮ್ಮನಹಳ್ಳಿ	ಹಗರಿಬೊಮ್ಮನಹಳ್ಳಿ (ಬಾಲಕರು)
೧೮.	ಬಳ್ಳಾರಿ	ಹೊಸಪೇಟೆ	ಹೊಸಪೇಟೆ(ಬಾಲಕರು)
೧೯.	ಬೀದರ್	ಔರಾದ್ ತಾ.	ಸಂತಪುರ(ಬಾಲಕರು)
೨೦.	ಬಾಗಲಕೋಟೆ	ಬಾಗಲಕೋಟೆ	ಬಾಗಲಕೋಟೆ(ಬಾಲಕರು)
೨೧.	ಚಾಮರಾಜನಗರ	ಯಳಂದೂರು	ಯಳಂದೂರು (ಬಾಲಕರು)
೨೨.	ರಾಯಚೂರು	ದೇವದುರ್ಗ	ದೇವದುರ್ಗ (ಬಾಲಕಿಯರು)
೨೩.	ಮಂಡ್ಯ	ಮಂಡ್ಯ	ಮಂಡ್ಯ (ಬಾಲಕಿಯರು)
೨೪.	ಬಿಜಾಪುರ	ಮುದ್ದೇಬಿಹಾಳ	ನಲ್ವತ್ವಾಡ(ಬಾಲಕಿಯರು)
೨೫.	ತುಮಕೂರು	ತಿಪಟೂರು	ತಿಪಟೂರು(ಬಾಲಕಿಯರು)

೧೧.೨೦ ಪಿಎಂ

ಶ್ರೀ ಪಿತ್ತೇಶ್ವರ ಹಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ವಿವಿಧ ಇಲಾಖೆಗಳಿಂದ ಕಟ್ಟಿಸಿಕೊಡಲಾಗುತ್ತಿರುವ ವಸತಿನಿಲಯಗಳ ಬಗ್ಗೆ ನಾನು ಪ್ರಶ್ನೆಯನ್ನು ಕೇಳಿದ್ದೇನೆ. ಇವೊತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಬಡ ಕೂಲಿಕಾರರಿಂದ ಹಿಡಿದು ರೈತರೂ ಸೇರಿದಂತೆ ನಮ್ಮ ಸಮಾಜದಲ್ಲಿ ಜಾಗರೂಕತೆ ಬಂದಿರುವುದರಿಂದ ಎಲ್ಲರೂ ಶಿಕ್ಷಣವನ್ನು ಕೊಡಿಸಬೇಕೆಂದು ತಮ್ಮ ಮಕ್ಕಳಿಗೆ ಅಪೇಕ್ಷೆ ಪಡುತ್ತಿರುವುದರಿಂದ ವಿದ್ಯಾರ್ಥಿಗಳ ಸಂಖ್ಯೆ ಜಾಸ್ತಿಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ, ಹಿಂದುಳಿದ ವರ್ಗಗಳ ಇಲಾಖೆಯಿಂದ ಪರಿಶಿಷ್ಟ ವರ್ಗಗಳ ಇಲಾಖೆಯಿಂದ ಹಾಗೂ ಅಲ್ಪಸಂಖ್ಯಾತರ ಇಲಾಖೆಯಿಂದ ಕೊಡುತ್ತಿರುವಂತಹ ಹಾಸ್ಟೆಲ್‌ಗಳನ್ನು ಗ್ರಾಮಾಂತರ ಪ್ರದೇಶದ ಕೇಂದ್ರಗಳಲ್ಲಿ ತೆರೆಯುವಂತಹ ಯೋಜನೆಗಳನ್ನು ಸರ್ಕಾರ ಮಾಡಬೇಕು. ತಾವು, ಹಣಕಾಸಿನ ಲಭ್ಯತೆ ಆಧಾರದ ಮೇಲೆ ಇದನ್ನು ಪರಿಶೀಲಿಸಲಾಗುವುದು ಎಂದು ಹೇಳಿದ್ದಿರಿ. ನಿಮ್ಮ ವಿವಿಧ ಇಲಾಖೆಗಳಲ್ಲಿ ಹಣಕಾಸಿನ ಕೊರತೆಯಿರುವುದು ನಮಗೆ ಮನವರಿಕೆಯಾಗಿದೆ. ಹಾಸ್ಟೆಲ್ ಕಟ್ಟಡಗಳು ಇಲ್ಲದೆ ನಮ್ಮ ಮಕ್ಕಳು ಎಷ್ಟು ತೊಂದರೆ ಪಡುತ್ತಿದ್ದಾರೆ ಎನ್ನುವುದು ಎಲ್ಲಾ ಶಾಸಕರಿಗೂ ಅನುಭವ ಇದೆ. ಈ ಹಾಸ್ಟೆಲ್‌ಗಳನ್ನು ಖಾಸಗಿಯವರಿಗೆ ವಹಿಸಲು ಯಾವುದಾದರೂ ಯೋಚನೆ ಮಾಡಿದ್ದೀರಾ? ಈಗಾಗಲೇ ಬೇರೆ ಬೇರೆ ಕಡೆಗಳಲ್ಲಿ ಖಾಸಗಿಯವರು ನಡೆಸುತ್ತಿದ್ದಾರೆ. ಗ್ರಾಮಾಂತರ ಪ್ರದೇಶದ ಮಕ್ಕಳು ಹೈಸ್ಕೂಲು ಹಾಗೂ ಜೂನಿಯರ್ ಕಾಲೇಜುಗಳಲ್ಲಿ ಓದುತ್ತಿರುವವರಿಗೆ ಅಲ್ಲೇ ಉಳಿದುಕೊಂಡು ವಿದ್ಯಾಭ್ಯಾಸ ಮಾಡುವುದಕ್ಕೆ ತಾವು ಅವಕಾಶ ಮಾಡಿಕೊಡುವುದಕ್ಕೆ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರೆಂಬುದನ್ನು ಹೇಳಬೇಕು?

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಅಧ್ಯಕ್ಷರೆ, ಖಾಸಗಿಯವರು ವಿದ್ಯಾರ್ಥಿನಿಲಯಗಳನ್ನು ಪ್ರಾರಂಭ ಮಾಡಿದರೆ ನಾವು ಅವರಿಗೆ ಇದೇ ದರದಲ್ಲಿ ಅನುದಾನವನ್ನು ಕೊಡುತ್ತೇವೆ. ಅದಕ್ಕೇನೂ ಅಭ್ಯಂತರವಿಲ್ಲ. ಆ ರೀತಿ ಉತ್ತಮವಾದಂತಹ ಸ್ವಯಂಸೇವಾಸಂಘಗಳು ಪ್ರಾರಂಭ ಮಾಡಿದರೆ ಖಂಡಿತವಾಗಿ ಸಹಾಯ ಮಾಡಿಕೊಡುತ್ತೇವೆ. ಆದರೆ ದುರಾದೃಷ್ಟವಶಾತ್ ಕೆಲವರು ವಿದ್ಯಾರ್ಥಿ ನಿಲಯಗಳನ್ನು ನಡೆಸತಕ್ಕಂಥವರು ವ್ಯಾಪಾರ ಮನೋಭಾವವನ್ನು ಇಟ್ಟುಕೊಂಡು ಅದಕ್ಕೆ ಇರಬೇಕಾದಂತಹ ಎಲ್ಲಾ ಪ್ರಾಮುಖ್ಯತೆಯನ್ನು ಕಳೆದುಬಿಟ್ಟಿದ್ದಾರೆ. ಅದಕ್ಕೆ ನನಗೆ ಆಂಜಿಕೆಯಿದೆ. ಆದರೂ ಕೂಡ ಹಾಸ್ಟೆಲ್ ಖಾಸಗಿಯವರು ನಡೆಸುತ್ತಾರೆಂದರೆ ಅವರಿಗೆ ಖಂಡಿತವಾಗಿ ಕೊಡುತ್ತೇವೆ. ಇನ್ನು ಕಟ್ಟಡದ ಬಗ್ಗೆ ಏನು ಹೇಳಿದ್ದಾರೆ, ಇವತ್ತು ಸಮಾಜಕಲ್ಯಾಣ ಇಲಾಖೆಯಿಂದ ವಿದ್ಯಾರ್ಥಿನಿಲಯಗಳನ್ನು ಕಟ್ಟುವುದಕ್ಕೆ ಹಣಕ್ಕೆ ಏನೂ ತೊಂದರೆಯಿಲ್ಲ. ಮುಖ್ಯವಾಗಿ ನಿವೇಶನಗಳನ್ನು ಒದಗಿಸಿಕೊಡಬೇಕು. ಎಲ್ಲೆಲ್ಲಿ ನಿವೇಶನಗಳನ್ನು ಒದಗಿಸಿ ಕೊಡುತ್ತಾರೆ, ಅವೆಲ್ಲಕ್ಕೂ ಕಟ್ಟಡ ಒದಗಿಸಿಕೊಡುತ್ತೇವೆ. ಹಿಂದುಳಿದ ವರ್ಗಕ್ಕೆ ಸೇರಿದ ೬೦೦ ವಿದ್ಯಾರ್ಥಿ ನಿಲಯಗಳಿಗೆ ಕಟ್ಟಡ ಇರಲಿಲ್ಲ, ಕಳೆದ

ವರ್ಷ ೫೦ ರಿಂದ ೬೦ ವಿದ್ಯಾರ್ಥಿನಿಲಯಗಳಿಗೆ ಕೊಟ್ಟಿದ್ದೇವೆ. ಈ ವರ್ಷ ಹುಡ್ಕೋದಿಂದ, ಮುಂದಿನ ವರ್ಷ, ಅದರ ಮುಂದಿನ ವರ್ಷ ಹೀಗೆ ಪ್ರತಿವರ್ಷ ನೂರು ವಿದ್ಯಾರ್ಥಿನಿಲಯಗಳನ್ನು ಕಟ್ಟುವುದಕ್ಕೆ ನಿರ್ಧಾರ ಮಾಡಿ, ಈಗಾಗಲೇ ೩೦೦ ವಿದ್ಯಾರ್ಥಿನಿಲಯಗಳನ್ನು ಕಟ್ಟುವುದಕ್ಕೆ ನಮ್ಮ ಸಚಿವಸಂಪುಟದಲ್ಲಿ ಒಪ್ಪಿಗೆಯಾಗಿದೆ. ಅದಕ್ಕೆ ಒಂದು ಪ್ರತ್ಯೇಕ ಸಂಘವನ್ನು ರಚನೆ ಮಾಡಿದ್ದೇವೆ. ಇನ್ನು ಆರು ತಿಂಗಳಲ್ಲಿ ೧೦೦ ಕಟ್ಟಡವನ್ನು ಕಟ್ಟುತ್ತೇವೆ. ನಿಮ್ಮ ಜಿಲ್ಲೆಯಲ್ಲಿ ನಿವೇಶನ ಇದ್ದು ಕಟ್ಟಡ ಅಗತ್ಯವಿದ್ದರೆ ಖಂಡಿತವಾಗಿ ಕೂಡ ಅದನ್ನು ಕಟ್ಟಿಸುತ್ತೇವೆ.

ಶ್ರೀ ಪರಮೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ನಿವೇಶನ ಇದ್ದು, ತಿಳಿಸಿದರೆ ಕಟ್ಟಡವನ್ನು ಕಟ್ಟಿಸಿಕೊಡುತ್ತೇವೆಂದು ಮಾನ್ಯ ಮಂತ್ರಿಗಳು ಭರವಸೆಯನ್ನು ಕೊಟ್ಟಿದ್ದಾರೆ. ಉದಾಹರಣೆಗೆ ನನ್ನ ಕ್ಷೇತ್ರದಲ್ಲಿ ಬೇರೆ ಬೇರೆ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತಂದಿರುವುದು ಇದೆ. ಸಿರ್ಸಿ ತಾಲ್ಲೂಕಿನಲ್ಲಿ ಸಾಲ್ಕಣಿ ಹೆಗಡೆ ಕಟ್ಟೆ, ಯಲ್ಲಾಪುರ ತಾಲ್ಲೂಕಿನಲ್ಲಿ ಬುಳ್ಳಾಪುರ ಹಾಗೂ ಮಳವಳ್ಳಿಯಲ್ಲಿ ಹಾಗೆ ಅಂಕೋಲ ತಾಲ್ಲೂಕಿನಲ್ಲಿ ಹಳವಳ್ಳಿ ಅಗ್ರಗೋಣ, ಈ ರೀತಿ ಕೇಂದ್ರಗಳಲ್ಲಿ ಬೇರೆ ಬೇರೆ ಹಾಸ್ಟೆಲ್‌ಗಳು ಬೇಕೆಂದು ಬೇಡಿಕೆ ಇದೆ. ಇದರ ಬಗ್ಗೆ ಈಗಾಗಲೇ ನಾನು ಮನವಿಯನ್ನು ಸಲ್ಲಿಸಿದ್ದೇನೆ. ಇಲಾಖಾವತಿಯಿಂದ ಸಹ ಬಂದಿದೆ. ಆದರೆ ಅನುಬಂಧ-೨ರಲ್ಲಿ ನಮ್ಮ ಜಿಲ್ಲೆಗೆ ಎಷ್ಟು ಹಾಸ್ಟೆಲ್ ಬೇಕೆಂದು ಕೇಳಿರುವುದು ನಮಗೆ ಕೊಟ್ಟಿಲ್ಲ. ಅದನ್ನು ನಮಗೆ ದೊರಕಿಸಿಕೊಡಬೇಕು. ಆದರೆ ಇಂತಹ ಕೇಂದ್ರಗಳಲ್ಲಿ ಸ್ವಲ್ಪ ವಿಶೇಷ ಆದ್ಯತೆ ಮೇಲೆ ವಿದ್ಯಾರ್ಥಿನಿಯರಿಗೆ ವಿದ್ಯಾರ್ಥಿನಿಲಯಗಳನ್ನು ಕಟ್ಟಿಸಿಕೊಡುವುದಕ್ಕೆ ಸರ್ಕಾರ ಮುಂದೆ ಬರುತ್ತದೆಯೇ ಎಂದು ತಿಳಿಸಬೇಕು.

ಶ್ರೀ ಕಾಗೋಡು ತಿಮ್ಮಪ್ಪ: ವಿದ್ಯಾರ್ಥಿನಿಯರಿಗೆ ವಿದ್ಯಾರ್ಥಿ ನಿಲಯಗಳು ಬೇಕೆಂದು ಬೇಡಿಕೆ ಜಾಸ್ತಿ ಬರುತ್ತಿದೆ. ಅದರಲ್ಲೂ ಗ್ರಾಮಾಂತರ ಪ್ರದೇಶದಲ್ಲಿ ಬೇಡಿಕೆ ಇದೆ. ನನಗೆ ಆಯವ್ಯಯದಲ್ಲಿ ಈ ವರ್ಷ ಸಿಕ್ಕಿರತಕ್ಕಂಥಾದ್ದು ಬಹಳ ಕಡಿಮೆ ಇದೆ. ಆದರೂ ಕೂಡ ತೀರಾ ಅಗತ್ಯವಾಗಿರತಕ್ಕಂಥ ಪ್ರದೇಶಕ್ಕೆ ಹೆಚ್ಚುವರಿ ವಿದ್ಯಾರ್ಥಿ ನಿಲಯಗಳನ್ನು ಕೊಡುವ ದೃಷ್ಟಿಯಿಂದ ಹೆಚ್ಚುವರಿ ಪ್ರಸ್ತಾವನೆಯನ್ನು ನಾನು ಮಾನ್ಯ ಮುಖ್ಯಮಂತ್ರಿಗಳ ಮುಂದೆ ಇಟ್ಟು ಒಪ್ಪಿಗೆಯನ್ನು ಪಡೆದುಕೊಂಡು ವಿದ್ಯಾರ್ಥಿನಿಲಯಗಳನ್ನು ನಿರ್ಮಿಸಲು ಪ್ರಯತ್ನ ಮಾಡುತ್ತೇನೆ. ಜಿಲ್ಲೆಯಲ್ಲಿ ಪ್ರತಿಯೊಬ್ಬರಿಗೂ ಕೊಡುವುದಕ್ಕಾಗುವುದಿಲ್ಲ. ಈಗಾಗಲೇ ತೀರ ಅಗತ್ಯ ಇದೆ ಎಂದರೆ ಅದನ್ನು ಪರಿಶೀಲನೆ ಮಾಡುತ್ತೇನೆ. ಉದಾಹರಣೆಗೆ ಹೋದಸಲ ಹಿಂದುಳಿದ ವರ್ಗದ ಕಾಲೇಜು ವಿದ್ಯಾರ್ಥಿ ನಿಲಯವನ್ನು ಭಟ್ಕಳಕ್ಕೆ ಕೊಟ್ಟೆವು. ಅವರು ನಮಗೆ ಬೇಡವೆಂದು ಹೇಳಿದರು. ಅಲ್ಲಿ ವಿದ್ಯಾರ್ಥಿಗಳು ಬರಲಿಲ್ಲ. ಬೈಂದೂರಿಗೆ ಕೊಟ್ಟೆವು. ಅವರೂ ಸಹ ಬೇಡವೆಂದು ಹೇಳಿದರು.

(ಮುಂದಿದೆ)

ಅಧ್ಯಕ್ಷರು: ನಾರ್ತ್ ಕೆನಾರದಲ್ಲಿ ಹಾಸ್ಪಿಟಲ್ ಬೇಕಾಗಿದೆ. ಅವರು ಕೇಳುತ್ತಿದ್ದಾರೆ. ಯೋಗೀಶ್ ಭಟ್‌ರವರೇ, ನಿಮ್ಮ ತಾಲ್ಲೂಕಿನಲ್ಲಿ ಹಾಸ್ಪಿಟಲ್ ಆಗಬೇಕು. ನನಗೆ ಗೊತ್ತಿದೆ. ಇದೇ ರೀತಿ ಅವಕಾಶ ಕೊಟ್ಟುಕೊಂಡು ಹೋದರೆ ಗುಳದ ಪ್ರಶ್ನೆ ಲಾಪ್ಸ್ ಆಗುತ್ತದೆ. ಇನ್ನು ಮುಂದೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಬೇಕಾದಂತಹ ಪ್ರಶ್ನೆಗಳಿವೆ. ಅವರಿಗೆ ಮೇಲ್ಕಿನಂತೆ ನಾಲ್ಕು ಪ್ರಶ್ನೆಗಳಿಗೆ ಉತ್ತರ ಕೊಡುವುದಿದೆ. ಆದುದರಿಂದ ಅವುಗಳನ್ನು ನಾಳೆ ತೆಗೆದುಕೊಳ್ಳೋಣ. ಅವರು ಸೆಕ್ರೆಟರಿ ಕೈಯಲ್ಲಿ ಹೇಳಿ ಕಳುಹಿಸಿದ್ದಾರೆ.

ಶ್ರೀ ಡೊಂಗರಗಾಂವ ಶಹಜಹಾನ್ ಇಸ್ಮಾಯಿಲ್: ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಗೆ ಮಾನ್ಯ ನಗರಾಭಿವೃದ್ಧಿ ಸಚಿವರಾದ ಚಿಮ್ಮನಕಟ್ಟಿಯವರು ಇದ್ದಾರೆ. ಅವರು ಉತ್ತರ ಕೊಡುತ್ತಾರೆ.

ಅಥಣಿ ಪಟ್ಟಣಕ್ಕೆ ಎರಡನೇ ಹಂತದ ಕುಡಿಯುವ ನೀರಿನ ಯೋಜನೆ.

266(3240)

ಶ್ರೀ ಡೊಂಗರಗಾಂವ ಶಹಜಹಾನ್ ಇಸ್ಮಾಯಿಲ್(ಅಥಣಿ): ಮಾನ್ಯ ಮುಖ್ಯಮಂತ್ರಿಯವರು ಕಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಅಥಣಿ ಪಟ್ಟಣಕ್ಕೆ ಎರಡನೇ ಹಂತದ ಕುಡಿಯುವ ನೀರಿನ ಯೋಜನೆ ಯಾವ ಸಾಲಿನಲ್ಲಿ ಪ್ರಾರಂಭವಾಯಿತು: ಸೂಕ್ತ ಪ್ರಸ್ತಾವನೆಗಳೊಂದಿಗೆ ಸರ್ಕಾರಕ್ಕೆ ಯಾವಾಗ ಸಲ್ಲಿಸಲಾಯಿತು.

2. ಜಲ ಮಂಡಲಿಯು ತಾಂತ್ರಿಕ ಮಂಜೂರಾತಿಯೊಂದಿಗೆ ಸರ್ಕಾರಕ್ಕೆ ಸಲ್ಲಿಸಿದ ದಿನಾಂಕ ಯಾವುದು? ಸರ್ಕಾರದಿಂದ ಆಡಳಿತಾತ್ಮಕ ಮಂಜೂರಾತಿ ದೊರೆತಿದ್ದು ಯಾವಾಗ? (ಪ್ರಸ್ತಾವನೆಯಿಂದ ಹಿಡಿದು ಮಂಜೂರಾತಿಯವರೆಗೆ ಪೂರ್ಣ ವಿವರಗಳನ್ನು ನೀಡುವುದು)

ಶ್ರೀ ಎಸ್. ಎಂ. ಕೃಷ್ಣ (ಮುಖ್ಯ ಮಂತ್ರಿಯವರು):

1. 2000-2001ನೇ ಸಾಲಿನಲ್ಲಿ ಪ್ರಸ್ತಾವನೆಯನ್ನು ತಯಾರಿಸಲಾಯಿತು. ಈ ಪ್ರಸ್ತಾವನೆಯನ್ನು ದಿನಾಂಕ 26.5.2001ರಲ್ಲಿ ಸರ್ಕಾರಕ್ಕೆ ಸಲ್ಲಿಸಲಾಗಿದೆ.

2. ಪ್ರಸ್ತಾವನೆಯನ್ನು ದಿನಾಂಕ 26.5.2001ರಂದು ಸರ್ಕಾರಕ್ಕೆ ಸಲ್ಲಿಸಲಾಗಿದೆ. ಪದರು ಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ.ನಅಇ 54 ಯುಡಬ್ಲ್ಯುಎಸ್ 2001 ದಿನಾಂಕ 30.6.2001ರಲ್ಲಿ ರೂ.444.84 ಲಕ್ಷಗಳ ಅಂದಾಜಿಗೆ ಆಡಳಿತಾತ್ಮಕ ಮಂಜೂರಾತಿ